IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಆಧುನಿಕ ಸಾಹಿತ್ಯದ ಸಂಶೋಧನೆಯ ಸವಾಲುಗಳು.

ಬಾಲರಾಜು ಬಿವಿ

ಸಹಾಯಕ ಪ್ರಾಧ್ಯಾಪಕರು

ಕ್ರೈಸ್ಟ್ ಅಕಾಡಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್

ಕೊಪ್ಪ-ಬೇಗೂರ್ ರೋಡ್ , ಹುಲ್ಲಹಳ್ಳಿ ಸಕಲವಾರ ಪೋಸ್ಟ್

ಬೆಂಗಳೂರು.೫೬೦೦೮೩

ಮನುಷ್ಯನು ಭೂಮಿಯ ಮೇಲೆ ಹುಟ್ಟಿಬಂದಂದಿನಿಂದ ಹಲವಾರು ವಸ್ತುಗಳ ಹುಡುಗಾಟದಲ್ಲಿ ತೊಡಗಿದ್ದಾನೆ. ಅವನು ಉಣ್ಣುವ ವಸ್ತು, ತೊಡುವ ಬಟ್ಟೆ, ಅವನ ಶೋಧನೆಯ ಫಲವೆಂದೇ ಹೇಳಬೇಕು. ಈಗಂತೂ ಮಾನವ ನೀರಿನಲ್ಲಿ ಮೀನಿನಂತೆ ಈಜಬಲ್ಲ, ಆಕಾಶದಲ್ಲಿ ಹಕ್ಕಿಯಂತೆ ಹಾರಬಲ್ಲ,ಚಂದ್ರಲೋಕದಲ್ಲಿ ಅಡಿ ಇಟ್ಟವನಾಗಿದ್ದಾನೆ. ಹೀಗೆಯೇ ಮನುಷ್ಯನ ಶೋಧನ ಪ್ರವೃತ್ತಿ ನಿರಂತರವಾಗಿ ಸಾಗಿದೆ. ಮಾನವನು ಚಕ್ರವನ್ನು ಕಂಡು ಹಿಡಿದು ಕಾಲವನ್ನು ಲೆಕ್ಕಹಾಕಿದಂದಿನಿಂದ . ಇದು ಆಧುನಿಕ ಸಂಶೋಧನೆಗೆ ತಳಪಾಯವನ್ನು ಹಾಕಿತು. ಹಾಗೇಯೇ ಸಂಶೋಧನೆಯ ಎನ್ನುವುದು ಸುಲಭದ ಮಾತಲ್ಲ, ಅದರಲ್ಲಿ ಹಲವಾರು ರೀತಿಯಲ್ಲಿ ಸಮಸ್ಯೆಗಳನ್ನು ಸವಾಲುಗಳನ್ನ ನಾವು ಎದುರಿಸಬೇಕಾಗುತ್ತದೆ.

ಕೆಲವು ಅಪವಾದಗಳನ್ನು ಬಿಟ್ಟು ಒಟ್ಟಾರೆಯಾಗಿ ಕನ್ನಡ ಸಂಶೋಧನೆಯು ಇಂದು ಪತನವಾಗುತ್ತಿದೆ ಎಂದರೆ ತಪ್ಪಗಲಾರದು. ಸಂಶೋಧನೆಯ ಕಾರ್ಯಗಳು ಇಂದು ಆಮೆಗತಿಯಲ್ಲಿ ನಡೆಯುತ್ತಿದೆ ಎಂದರೆ ತಪ್ಪಗಲಾರದು. ಹಾಗೇಯೇ ಹೊಸತನವನ್ನು ಕಾಣದಿರುವುದು ದುರ್ದೈವದ ಸಂಗತಿ. ಇಂದಿನ ಸಂಶೋಧನೆಯ ಆಯ್ಕೆಯಾಗುವ ವಿಷಯದಲ್ಲಿ ಯಾವುದೇ ಹೊಸತನ ಕಾಣಸಿಗುವುದಿಲ್ಲ ಮತ್ತು ಸರಳವಾದ ವಿಷಯಗಳಾಗಿದ್ದು ನಮ್ಮ ಜ್ಞಾನದ ಮಟ್ಟವನ್ನು ಅದು ವಿಸ್ತರಿಸುತ್ತಿಲ್ಲ. ಮತ್ತು ಸಂಶೋಧನೆಯು ಇಂದು ತನ್ನ ವರ್ಚಸ್ಸನ್ನು ಕಳೆದುಕೊಳ್ಳುತ್ತಿದೆ ಎಂದರೆ ತಪ್ಪಾಗಲಾರದು. ಸಂಶೋಧನಯೆ ಬಗ್ಗೆ ಯಾವುದೇ ಗಂಭೀರ ಚರ್ಚೆಗಳಾಗಲಿ ನಡೆಯದಿರುವುದು ವಿಷಾದನೀಯ ಸಂಗತಿ.

ದೇಶಾಧ್ಯಂತ ಹಲವಾರು ಉನ್ನತ ಶಿಕ್ಷಣ ಕೇಂದ್ರಗಳಿವೆ ಅದರಲ್ಲೂ ಕರ್ನಾಟಕದಲ್ಲಿ ಸುಮಾರು ೫೦ಕ್ಕೂ ಹೆಚ್ಚು ಸಂಶೋಧನಾ ಕೇಂದ್ರಗಳಿವೆ. ಇಲ್ಲಿ ಸಂಶೋಧನೆ ಮಾಡುತ್ತಿರುವವ ರ ಸಂಖ್ಯೆ ಕೇವಲ ಬೆರಳಣಿಕೆಯಷ್ಟು. ಇದು ಕರ್ನಾಟಕದ ಒಟ್ಟು ಶೇ. ೦.೦೮ ನಮ್ಮ ರಾಜ್ಯವು ಸಂಶೋಧನೆಯ ದೃಷ್ಟಿಯಿಂದ ಬಹಳ ಹಿಂದಿ ಬಿದ್ದಿದೆ ಎಂದರೆ ತಪ್ಪಾಗಲರಾದು. ಹಾಗೇಯೇ ಸಂಶೋಧನೆಯ ದೃಷ್ಟಿಯಿಂದ ಅಂತದ್ದೇನು ಮಹತ್ವದನ್ನು ಸಾಧಿಸಿಕೊಂಡಿಲ್ಲ. ಹಾಗೇಯೇ ಹಲವು ಸಂಶೋಧಕರಿಗೆ ಸಂಶೋಧನೆಯನ್ನು ಹೇಗೆ ಮಾಡಬೇಕೆಂದು ತಿಳಿದಿರುವುದಿಲ್ಲ. ಆರಿಸಿಕೊಂಡ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಅಧ್ಯಯನಗಳ

ಒದು ಮತ್ತು ಅವುಗಳ ವಿಶ್ಲೇಣಾತ್ಮಕ ಮತ್ತು ವಿಮರ್ಶಾತ್ಮಕತೆ ಕಾಣೆಯಾಗಿರುತ್ತದೆ ಎನ್ನುವುದು ,ಜೊತೆಗೆ ಬಳಸುವ ಪಾರಿಭಾಷಕ ಪದಗಳಲ್ಲಿ ಅಸ್ಪಷ್ಟತೆ ಹಾಗೂ ಗೊದಲಗಳಿರುತ್ತವೆ ಎನ್ನುವುದು ಹಲವಾರು ಮಾರ್ಗದರ್ಶಕರ ವಾದ. ಇದಕ್ಕೆಲ್ಲ ಅಪವಾದವೆಂಬಂತೆ ವಿದ್ಯಾರ್ಥಿಗಳಲ್ಲಿ ಕಂಡು ಬರುವ ಅಸಡ್ಡೆಯು ಯಾವುದೇ ಬಗೆಯ ಚರ್ಚೆಗಳನ್ನು ಕೂಡ ನಡೆಯಲು ಅವಕಾಶ ಕೊಡುತ್ತಿಲ್ಲ. ಇನ್ನೊಂದು ಮುಖ್ಯ ವಿಷಯವೇನೆಂದರೆ ಕನ್ನಡ ಭಾಷಾ ಶಿಕ್ಷಣದಲ್ಲಿ ಯಾವ ಹಂತದಲ್ಲೂ ಸಂಶೋಧನೆಗೆ ಸಂಬಂಧಪಟ್ಟ ವಿಷಯಗಳಿಲ್ಲದಿರುವುದು.

ಕೆಲಸ ಮಾಡಬಯಸುವ ಕ್ಷೇತ್ರದಲ್ಲಿ ಯಾವ ಬಗೆಯ ಸಂಶೋಧನೆಗಳು ನಡೆದಿವೆ, ಮತ್ತು ನಡೆಯುತ್ತಿವೆ , ಎಂದು ಗ್ರಹಿಸಿ ಅದನ್ನು ಸಂಶೋಧನಾ ವಿದ್ಯಾರ್ಥಿಗಳಿಗೆ ತಿಳಿಸುವ ಅಧ್ಯಾಪಕರ ಸಂಖ್ಯೆ ಇಂದು ಕಡಿಮೆಯಾಗಿದೆ. ಇಂದಿನ ಸಂಶೋಧನೆಯ ಮಟ್ಟ ಎಷ್ಟು ಕುಗ್ಗಿದೆ ಎಂದರೆ ಸಮಾನ ಆಸಕ್ತಿಯ ವಿದ್ವಾಂಸರ ಜೊತೆ ಯಾವುದೇ ರೀತಿಯ ಸಂವಾದಗಳು ಇಂದು ನಡೆಯುತ್ತಿಲ್ಲ. ಸಂಶೋಧನೆಯ ಮತ್ತೊಂದು ಪ್ರಮುಖ ಸಮಸ್ಯೆ ಎಂದರೆ ಯಾವುದೋ ಕಾರಣಕ್ಕೆ ಸಂಶೋಧನೆಯನ್ನು ಆರಂಭಿಸುತ್ತಾರೆ, ಅದಕ್ಕಾಗಿ ಶ್ರಮವನ್ನು ವಹಿಸುತ್ತಾರೆ. ಆನಂತರ ಆ ಕಾರ್ಯವನ್ನು ಬಿಟ್ಟು ಮೌನವಾಗಿಬಿಡುತ್ತಾರೆ. ಹಾಗೇಯೇ ಎಷ್ಟೋ ಜನರು ಪದವಿ ಪಡೆದ ಮೇಲೆ ಲೇಖನಗಳನ್ನು ಬರೆಯುವುದನ್ನು ಬಿಟ್ಟು ಬಿಡುತ್ತಾರೆ. ಸಂಶೋಧನೆಯು ನಿರಂತರವಾದದ್ದು ಎಂದು ತಿಳಿಯವರೆಗೂ ನಮ್ಮ ಸಂಶೋಧನಾ ಕ್ಷೇತ್ರ ಅಭಿವೃದ್ಧಿಯಾಗದು. ಸರ್ಕಾರದಿಂದ ಸಂಶೋಧನೆಗೆ ಹೆಚ್ಚಿನ ಸೌಕರ್ಯಗಳು ಸಿಗದ ಕಾರಣ ಸಂಶೋಧನೆಗೆ ಹೆಚ್ಚಿನ ಜನರು ಆಸಕ್ತಿಯನ್ನು ತೋರಿಸುತ್ತಿಲ್ಲ. ಭಾರತದ ಪರಿಸ್ಥಿತಿಗೆ ಹೋಲಿಸಿದರೆ, ವಿಧೇಶಗಳಲ್ಲಿ ಸಂಶೋಧನೆಗೆ ಹೆಚ್ಚಿನ ಧನ ಸಹಾಯವನ್ನು ನೀಡಲಾಗುತ್ತದೆ.

ಇಂದು ಮಾನವ ಸಂಪನ್ಮೂಲ ಇಲಾಖೆಯು ನಡೆಸುತ್ತಿರುವ ತರಬೇತಿ ಕಮ್ಮಟಗಳೂ ಕೂಡ ಯಾಂತ್ರಿಕವಾಗಿ ಮುಗಿದು ಹೋಗುತ್ತಿವೆ. ಅಧ್ಯಾಪಕರು ತಮ್ಮ ವೇತನ ಮತ್ತು ಬಡ್ತಿಗಾಗಿ ಕಮ್ಮಟಗಳಲ್ಲಿ ಭಾಗವಹಿಸುತ್ತಾರೆ. ಇಂದು ಸಂಶೋಧನೆಯ ಬಗ್ಗೆಹೊಸದಾಗಿ ಯೋಚಿಸುವ ಕಾಲ ಬಂದಿದೆ. ಸಂಶೋಧನೆಯ ಮೇಲೆ ಇಂದು ದೌರ್ಜನ್ಯಗಳು ಹೆಚ್ಚಾಗುತ್ತಿವೆ.

ಮತ್ತೊಂದು ಪ್ರಮುಖವಾದ ವಿಷಯವೇನೆಂದರೆ. ಸಂಶೋಧನೆಗೆ ಬೇಕಾದ ಪರಿಕರಗಳ ಕೊರತೆ, ಸಾಹಿತ್ಯ ಸಂಸ್ಕೃತಿಗಳ ಸಂಶೋಧನೆಯ ಸ್ವರೂಪವನ್ನು ತಿಳಿಸುವ ಕೃತಿಗಳು ಇಲ್ಲ.ಡಾ. ಚಿದಾನಂದಮೂರ್ತಿಯ ಅವರ 'ಸಂಶೋಧನೆ' ಹೊಸ್ಕೆರೆ ಶಿವಸ್ವಾಮಿ ಅವರ ಸಂಶೋಧನೆಶಾಸ್ತ್ರ, ಡಾ. ಪ್ರ ವಿ ಕುಲಕರ್ಣಿ ಭರಣ್ಯ ಬಿ ಸದಾಶಿವ ಅವರ ಸಂಶೋಧನೆಯ ವಿಧಾನ, ಮೊದಲಾದವು.

ಹಾಗೇ ನೋಡಿದರೆ ಕನ್ನಡ ಸಂಶೋಧನೆಗೆ ಒಳ್ಳೆಯ ಇತಿಹಾಸವಿದೆ. ಈಸ್ಟ್ ಇಂಡಿಯಾ ಕಂಪೆನಿಯ ನೌಕರನಾಗಿ ೧೭೬೨ ರಲ್ಲಿ ಬಾರತಕ್ಕೆ ಬಂದ ಬುಕ್ ಸನ್, ೧೭೮೩ರಲ್ಲಿ ಕರ್ನಾಟಕ ಪ್ರವೇಶಿಸಿದ ಲೆ.ಕ. ಮೆಕೆಂಜಿ, ಶ್ರೀರಂಗಪಟ್ಟಣದ ಲಾವಣಿಯನ್ನು, ೧೮೦೩ ಸಂಗ್ರಹಿಸಿದ. ೧೮೧೭ ರಲ್ಲಿ ಕನ್ನಡ ಗಾದೆ , ಒಗಟು ಮತ್ತು ನಂಬಿಕೆಗಳನ್ನು ಸಂಗ್ರಹಿಸಿದ ಅಬ್ಬೆ ದುಬಾಯಿ, ೩೦೦೦ ಕನ್ನಡ ಗಾದೆಗಳಿರುವ ಬೃಹತ್ ಸಂಪುಟವನ್ನು ೧೮೪೭ ರಲ್ಲಿ ಪ್ರಕಟಿಸಿದ ಮೋಗ್ಲಿಂಗ್, ದಾಸರ ಪದಗಳ ಮೌಖಿಕ ರೂಪಗಳನ್ನು ೧೮೩೧ ರಲ್ಲಿ ಸಂಗ್ರಹಿಸಿದ ಗೋವರ್, ೧೮೭೩ರಲ್ಲಿ ಕನ್ನಡಕ್ಕೊಂದು ನಿಘಂಟು ನೀಡಿದ ಕಿಟಲ್, ೧೮೮೫ ರಲ್ಲಿ ೧೭ ಐತಿಹಾಸಿಕ ಲಾವಣಿಗಳನ್ನು ನಾಲ್ಕು ದಂಡಕಗಳನ್ನು , ನಾಲ್ಕು ಜೋಗುಳದ ಹಾಡುಗಳನ್ನು ಸಂಗ್ರಹಿಸಿದ ಜೆ.ಎಫ್, ಫ್ಲೀಟ್ , ಜನಪದ ಕತೆಗಳ ಕಡೆಗೆ ೧೮೮೧ ರಲ್ಲಿಯೇ ಮುಖಮಾಡಿದ ಮೇರಿ ಫ್ರೀಯರೆ, ಇವರ ಕೆಲಸಗಳ ಮೂಲ ಉದ್ದೇಶಗಳು ಏನೇ ಇದ್ದಿರಲಿ, ಇವತ್ತು ಅವು ಆ ಮೂಲ ಉದ್ದೇಶಗಳನ್ನೂ ಮೀರಿ ಕನ್ನಡ ಸಂಶೋಧನೆಗೆ ಭದ್ರ ತಳಪಾಯವನ್ನು ನಿರ್ಮಿಸಿಕೊಟ್ಟಿವೆ.

ಇನ್ನೊಂದೆಡೆ ತಿಳಿವಳಿಕೆಗಳು ಅಂತರಾಷ್ಟ್ರೀಯಗೊಳ್ಳುತ್ತಿರುವ ಆಧುನಿಕ ಪ್ರಕ್ರಿಯೆ, ಇವೆರಡರ ನಡುವೆ ಸಂಶೋಧನೆಯನ್ನು ಗಂಭೀರವಾಗಿ ಪರಿಗಣಿಸದ ಸಂಶೋಧಕರು ಇವು ದೊಡ್ಡ ಸಮಸ್ಯೆಗಳು. ಈ ಜವಾಬ್ದಾರಿಯನ್ನು ಸಂಶೋಧಕರು ತುರ್ತಾಗಿ ಹೊತ್ತುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ನಮ್ಮ ಸಂಶೋಧನೆಗಳಿಗೆ ಯಾವ ಬೆಲೆಯೂ ಇರುವುದಿಲ್ಲ.ಸಂಶೋಧನೆಯಲ್ಲಿ ಇನ್ನೂ ನಾವು ವ್ಯಾಪಕವಾದ,

ಶಾಸ್ತ್ರೀಯವಾದ ರೀತಿಯಲ್ಲಿ ಸಂಗ್ರಹಕಾರ್ಯ ನಡೆಯಬೇಕು. ಅದಕ್ಕಾಗಿ ಸಮಗ್ರ ಕ್ಷೇತ್ರ ಕಾರ್ಯವಾಗಬೇಕು. ದೊರೆತವುಗಳನ್ನು ಸಂಗ್ರಹಿಸಿ ಇಡುವ ಜಾನಪದ ಭಂಡಾರಗಳು ರೂಪುಗೊಳ್ಳಬೇಕು. ಅವನ್ನೆಲ್ಲ ಶಾಸ್ತ್ರೋಕ್ತವಾಗಿ ಅಧ್ಯಯನ ಮಾಡುವ ಒಂದು ಪಡೆಯೇ ಸಿದ್ಧವಾಗಬೇಕು. ಅಂದಾಗ ಜಾನಪದ ಅಧ್ಯಯನಕ್ಕೆ ಒಂದು ಹಾದಿಯನ್ನು ಕಂಡುಕೊಂಡಂತಾಗುತ್ತದೆ.

ಇವೆಲ್ಲಕ್ಕೆ ಪ್ರೇರಕವಾಗುವಂತೆ ಮೈಸೂರು, ಕರ್ನಾಟಕ, ಗುರ್ಬರ್ಗಾ, ಮಂಗಳೂರು ಬೆಂಗಳೂರು ವಿವಿ ಗಳು ನಿಂತಿವೆ. ಕರ್ನಾಟಕ ವಿಶ್ವವಿದ್ಯಾಲಯವಂತೂ ಪ್ರತಿವರ್ಷ ಅಖಿಲಭಾರತ ಜಾನಪದ ಸಮ್ಮೇಳನವನ್ನು ಏರ್ಪಡಿಸಿ, ವಿವಿಧ ವಿಷಯಗಳ ಚಿಂತನ ಮಂಥನದ ಜೊತೆಗೆ ಅಲ್ಲಿ ಮಂಡಿತವಾದ ಲೇಖನಗಳನ್ನು ಜಾನಪದ ದರ್ಶನ ಹೆಸರಿನಲ್ಲಿ ಹೊರತರುತ್ತಿದೆ. ಸರಕಾರ ಜಾನಪದ ಅಕಾಡಮಿ ಮೂಲಕ ಜಾನಪದ ಹಾಡುಗಾರರನ್ನು, ಕಲಾಕಾರರನ್ನು ಗುರುತಿಸಿ,ಪ್ರೋತ್ಸಾಹ ನೀಡುತ್ತಿದೆ. ಇನ್ನೂ ಅನೇಕ ಸಂಸ್ಥೆಗಳು ಸಂಸ್ಕೃತಿ ಉಳಿವಿಗಾಗಿ ಸಾಕಷ್ಟು ಪ್ರಯತ್ನಿಸುತ್ತಿವೆ.